ಶ್ರೀ ಪಂಪಾಪತಿ.— ಅಧ್ಯಕ್ಷರೇ, ಮಾನ್ಯ...

(ಗೊಂದಲ)

ಅಧ್ಯಕ್ಷರು.— ಭೈರೇಗೌಡರೇ ತಾವು ಏನನ್ನೂ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಜಿ. ನಾರಾಯಣಕುಮಾರ್.— ಕಾರ್ಮಿಕರ ಬಗ್ಗೆ ನಾವೂ ಕೂಡಾ ಹೋರಾಟ ಮಾಡಿ ಕೊಂಡು ಬಂದಿದ್ದೇವೆ.

(ಗೊಂದಲ)

ಶ್ರೀ ಪಂಪಾಪತಿ.— ಈ ವಿಷಯದ ಬಗ್ಗೆ...

(ಗೊಂದಲ)

ಅಧ್ಯಕ್ಷರು.— ಇದು ವಿಧಾನಸಭೆ ಇದೆ. ಪಂಪಾಪತಿಯಂವರೇ ಮನೆಯಲ್ಲಿ ಜಗಳ ಮಾಡುವ ರೀತಿ ಮಾತನಾಡುತ್ತಿದ್ದೀರಲ್ಲಾ ?

ಶ್ರೀ ಪಂಪಾಪತಿ.— ಮಾನ್ಯ ಭೈರೇಗೌಡರು ಆ ರೀತಿ ಹೇಳಬಾರದು ಎಂದು ಹೇಳುತ್ತೇನೆ.

III. ಗುಲ್ಬರ್ಗ ಜಿಲ್ಲೆಯ ವಾಡಿ ರೈಲ್ವೆ ಸ್ಟೇಷನ್ ಬಳಿ ನಡೆದ ದರೋಡೆ.

ಶ್ರೀ ಆರ್. ವೆಂಕಟರಾಮಯ್ಯ — ಗುಲ್ಬರ್ಗ ಜಿಲ್ಲಾ ವಾಡಿ ರೈಲ್ವೆ ಸ್ಟೇಷನ್ ಬಳಿ ನಡೆದ ದರೋಡೆಯ ಬಗ್ಗೆ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಮಂತ್ರಿಗಳು) — ಮಾನ್ಯ ಅಧ್ಯಕ್ಷರೇ, ದಿನಾಂಕ ೪-೩-೮೬ ರಂದು ಬೆಳಿಗ್ಗೆ ೪ ಘಂಟೆ ಸಮಯದಲ್ಲಿ ವಾಡಿ ಕಾರ್ಡ್ ಲೈನ್ ಆಚೆ ನಿಲ್ಲಿಸಿದ್ದ ೧೨೮ ಕರ್ನಾಟಕ ಎಕ್ಸ್‌ಪ್ರೆಸ್ ಟ್ರೈನಿನಲ್ಲಿ ಸೂಟ್‌ಕೇಸುಗಳು ಕಳುವಾಗಿವೆಯೆಂದು ವಾಡಿ ಪೊಲೀಸ್ ಠಾಣೆಯ ಎ. ಎಸ್. ಐ ರವರಿಗೆ ಸುದ್ದಿ ಬಂತು. ಸದರಿ ರೈಲು ನ್ಯೂ ಡೆಲ್ಲಿಯಿಂದ ಹೈದರಾಬಾದ್ ಮೂಲಕ ಬೆಂಗಳೂರಿಗೆ ಬರುತ್ತಿದ್ದು ಆದು ವಾಡಿ ರೈಲ್ವೆ ನಿಲ್ದಾಣದಲ್ಲಿ ಉಪ ಮಾರ್ಗದ ಮೂಲಕ ರಾಯಚೂರಿಗೆ ಹೋಗುವುದಿತ್ತು. ಎ. ಎಸ್. ಐ. ರವರು ಸುದ್ದಿ ತಿಳಿದ ತಕ್ಷಣ. ಇದ್ದ ಸಿಬ್ಬಂಧಿಯೊಂದಿಗೆ ಸ್ಥಳಕ್ಕೆ ಧಾವಿಸಿದರು ಮತ್ತು ವಾಡಿ ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರಿಗೆ ಸುದ್ದಿಯನ್ನು ತಿಳಿಸಿದರು.

ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಕೂಡಲೇ ಸ್ಥಳಕ್ಕೆ ಧಾವಿಸಿ ಯಲಹಂಕದ ಗೋಯಲ್ ಎಂಬುವರು ಕಳ್ಳತನದ ಬಗ್ಗೆ ಜೋರು ಧ್ವನಿಯಲ್ಲಿ ಮಾತನಾಡುತ್ತಿದ್ದು ಅವರನ್ನು ಸಂಪರ್ಕಿಸಿದರು. ಸದರಿ ಗೋಯಲ್‌ರವರು ಬಾಯಿ ಮಾತಿನಲ್ಲಿ ತನ್ನ ಸೂಟ್‌ಕೇಸೂ ಸೇರಿದಂತೆ ಆರು ಸೂಟ್‌ಕೇಸುಗಳನ್ನು ಯಾರೋ ಅಪರಿಚಿತ ವ್ಯಕ್ತಿಗಳು ಹೈದರಾಬಾದ್ ಮತ್ತು ವಾಡಿ ಮಧ್ಯೆ ಕಳುವು ಮಾಡಿದ್ದಾರೆಂದು ಹೇಳಿದರು. ಅವರು ಮುಂದುವರೆಯುತ್ತಾ ರೈಲು ಹೈದರಾಬಾದನ್ನು ಬಿಟ್ಟಮೇಲೆ ಎರಡು ಮತ್ತು ಮೂರು ಘಂಟೆ ಮಧ್ಯದ ಸಮಯದಲ್ಲಿ ಮೇಲ್ಕಂಡ ಸೂಟ್‌ಕೇಸುಗಳನ್ನು ಕೆಲವು ಅಪರಿಚಿತ ವ್ಯಕ್ತಿಗಳು ಕಳವು ಮಾಡಿದ್ದಾರೆಂದು ಹೇಳಿದರು. ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಸೂಟುಕೇಸುಗಳನ್ನು ಇಟ್ಟಿದ್ದ ವಿಶೇಷ ತರಗತಿಯ ಮೂರು ಟಯರಿನ ಬೋಗಿಗಳನ್ನು ಶೋಧಿಸಿದರು. ಈ ಬೋಗಿಯಂತ ಇಂಜಿನ್ನಿನಿಂದ ಮೂರನೆಯದಾಗಿದ್ದು, ಮಹಿಳೆಯರ ಕೋಣೆಗೆ ಬೇರೆ ಬಾಗಿಲು ಇರಲಿಲ್ಲ. ಆ ಬೋಗಿಯ ವೆಸ್ಟಿಬುಲ್ ಕ್ಯಾನ್‌ವಾಸ್‌ನ ಬಟ್ಟೆಯು ಹರಿದಿದ್ದು, ದುಷ್ಕರ್ಮಿಗಳು ಅದನ್ನೂ ಬೋಗಿಯ ಒಳಗಡೆ ಹೋಗುವುದಕ್ಕೆ ಮತ್ತು ಹೊರಗಡೆ ಬರುವುದಕ್ಕೆ ಉಪಯೋಗಿಸಿಕೊಂಡಿರಬಹುದೆಂದು ಭಾವಿಸಲಾಗಿದೆ. ವಾಡಿಯಲ್ಲಿ ರೈಲನ್ನು ನಿಲುಗಡೆ ಮಾಡದೇ ಇರುವುದರಿಂದ ರೈಲು ಕೂಡಲೇ ರಾಯಚೂರು ಕಡೆಗೆ ಹೊರಟಿತ್ತು. ರೈಲು ನಿಲ್ಲಿಸುವುದರಿಂದ ಪ್ರಯಾಣಿಕರಿಗೆ ಆಗುವ ತೊಂದರೆಯನ್ನು ತಪ್ಪಿಸಲು ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಎ. ಎಸ್. ಐ. ರವರನ್ನು ಇತರ ಸಿಬ್ಬಂಧಿಯೊಂದಿಗೆ ವಸ್ತುಗಳನ್ನು ಕಳೆದುಕೊಂಡವರ ಹೇಳಿಕೆಯನ್ನು ಪಡೆಯಲು ರೈಲಿನಲ್ಲಿ ಕಳುಹಿಸಿದರು. ನಂತರ ಒಬ್ಬ ಆರಕ್ಷಕ ಮುಖ್ಯ ಪೇದೆ ಮತ್ತು ಆರಕ್ಷಕ ಪೇದೆಗಳನ್ನು ವಿಕರಾಬಾದ್ ಕಡೆಗೆ ಕಳುಹಿಸಿದ ವಸ್ತುಗಳನ್ನೂ ಹಾಗೂ ದುಷ್ಕರ್ಮಿಗಳನ್ನು ಪತ್ತೆ ಹಚ್ಚಲು ರೈಲು ಕಂಬಿಯ ಮೇಲೆ ಕಳುಹಿಸಿದರು. ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಸ್ಥಳದಲ್ಲಿಯೇ ಇದ್ದು, ಉಳಿದ ಸಿಬ್ಬಂಧಿಯೊಂದಿಗೆ ಐದಾರು ಕಿ.ಮೀ. ಸುತ್ತಳತೆಯ ಪ್ರದೇಶದಲ್ಲಿರುವ ರೈಲು ಕಂಬಿ ಹಾಗೂ ಪಕ್ಕದ ಹಳ್ಳಿಗಳನ್ನು ಶೋಧಿಸಿದರು. ಆದರೆ ಯಾವ ಸುಳಿವೂ ಸಿಗಲಿಲ್ಲ.

ಅದೇ ದಿನಾಂಕ ಮಧ್ಯಾಹ್ನ ಎ. ಎಸ್. ಐ. ರವರು ವಸ್ತುಗಳನ್ನು ಕಳೆದು ಕೊಂಡವರಿಂದ ಹೇಳಿಕೆ ಗಳನ್ನು ಪಡೆದು ವಾಪಸ್ಸು ಬಂದು, ಈ ಕೆಳಕಂಡ ಮೊಕದ್ದಮೆಗಳನ್ನು ದಾಖಲು ಮಾಡಿಕೊಂಡರು.

ಕ್ರಮ ಸಂಖ್ಯೆ	ಫಿರ್ಯಾದು ದಾರರ ಹೆಸರು	ಕಳುವಾದ ವಸ್ತು ಗಳ ಮೌಲ್ಯ	ಅಪರಾಧ ಸಂಖ್ಯೆ ಮತ್ತು ಕಲಂ
		ರೂ.	
೧.	ವಿಕ್ಟರ್ ಜೋಸ್ವ (ಯಂಪಿ)	೩,೦೦೦-೦೦	೨೨-೮೬ ಕಲಂ ೩೭೯ ಐಪಿಸಿ
೨.	ರಮೇಶ ಗುಪ್ತ (ಡೆಲ್ಲಿ)	೮,೦೦೦-೦೧	೨೩-೮೬ ಕಲಂ ೩೭೯ ಐಪಿಸಿ
೩.	ಗೋಯಲ್, ಬೆಂಗಳೂರು	೨,೦೦೦-೦೦	೨೪-೮೬ ಕಲಂ ೩೭೯ ಐಪಿಸಿ
೪.	ಶಾಂತಕುಮಾರ್	೫,೨೦೦-೦೦	೨೫-೮೬ ಕಲಂ ೩೭೯ ಐಪಿಸಿ
೫.	ಶ್ರೀಮತಿ ಉಷಾ, ಮೈಸೂರು	೧;೨೦೦-೦೦	೨೬-೮೬ ಕಲಂ ೩೭೯ ಐಪಿಸಿ
೬.	,, ವಿದ್ಯಾವತಿ, ಬೆಂಗಳೂರು	೮,೦೦೦-೦೦	೨೭-೮೬ ಕಲಂ ೩೭೯ ಐಪಿಸಿ
	ಒಟ್ಟು ರೂ.	೨೭,೨೦೦-೦೦	

ಜನರಲ್ಲಿ ಭೀತಿ ಮೂಡಿಸಿರುವಂತಹ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಹೋಗಿ ಬರುವ ಮುಖ್ಯ ರೈಲು ಗಾಡಿಗಳಲ್ಲಿ ಶಸ್ತ್ರ ಸಜ್ಜಿತ ಆರಕ್ಷಕರುಗಳನ್ನು ನೇಮಿಸಿ ಜನಗಳ ರಕ್ಷಣೆಗಾಗಿ ಕ್ರಮ ಕೈಗೊಳ್ಳಲಾಗಿದೆ. ಕರ್ನಾಟಕ ರಾಜ್ಯದ ಸುತ್ತಮುತ್ತಲಿನ ನೆರೆ ರಾಜ್ಯಗಳ ಪೊಲೀಸ್ ಕಾರ್ಯಾಲಯಗಳಿಗೆ ವರ್ತಮಾನ ಕಳುಹಿಸಿ ಕೊಟ್ಟಿದ್ದು, ಈ ರೀತಿಯ ಅಪರಾಧ ಮಾಡುವವರ ಬಗ್ಗೆ ಹೆಚ್ಚಿನ ನಿಗಾವಣೆ ಮಾಡಿ ಅವರನ್ನು ಪತ್ತೆ ಹಚ್ಚುವಂತೆ ವಿನಂತಿಸಿಕೊಳ್ಳಲಾಗಿದೆ. ಅಲ್ಲದೆ, ನೆರೆ ರಾಜ್ಯದ ಅಪರಾಧಿಗಳ ಪರಿಶೀಲನೆಯನ್ನು ಮಾಡುವಲ್ಲಿ ತನಿಖಾಧಿಕಾರಿಗಳು ಮುನ್ನಡೆದಿದ್ದಾರೆ. ಇಷ್ಟೇ ಅಲ್ಲದೆ ಪ್ರತ್ಯೇಕವಾದ ಗಸ್ತು ಮತ್ತು ಅಪರಾಧ ಪತ್ತೆ ದಳಗಳನ್ನು ನಿರ್ಮಿಸಿ ಈ ಪ್ರಕರಣವನ್ನು ಪತ್ತೆ ಹಚ್ಚಲು ಶ್ರಮಿಸಲಾಗುತ್ತಿದೆ. ಈ ಪ್ರಕರಣವನ್ನು ಎಲ್ಲಾ ರೀತಿಯಿಂದಲೂ ಪತ್ತೆ ಮಾಡಲು ರಾಜ್ಯ ರೈಲ್ವೆ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ.

ಡಕಾಯಿತರು ಕೆಮಿಕಲ್ ಉಪಯೋಗಿಸಿ ಪ್ರಯಾಣಿಕರಿಗೆ ನಿದ್ದೆ ಬರುವಂತೆ ಮಾಡಿ ದರೋಡೆ ಮಾಡಿರುವ ಬಗ್ಗೆ ವಸ್ತುಗಳನ್ನು ಕಳೆದುಕೊಂಡ ಪ್ರಯಾಣಿಕರನ್ನು ವಿಚಾರಿಸಿದ ನಂತರ ತಿಳಿದು ಬರುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ — ಇದು ನಮ್ಮ ಕರ್ನಾಟಕ ರಾಜ್ಯದಲ್ಲಿ ನಡೆದ ಮತ್ತೊಂದು ದೊಡ್ಡ ದರೋಡೆಯಾಗಿದೆ. ಈಗಲೂ ದರೋಡೆಗಳು ನಡೆಯುತ್ತಲೇ ಇವೆಯೆಂದು ಕೇಳುತ್ತಿದ್ದೇವೆ. ಬೆಂಗಳೂರಿನಲ್ಲಂತೂ ಪ್ರತಿದಿನ ನಡೆಯುತ್ತಲೇ ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ದರೋಡೆ ಯನ್ನೂ ಕೇಳಿದ್ದೇವೆ. ಆದರೆ ಈಗ ನಡೆದಿರುವುದು ಒಂದು ಹೊಸ ರೀತಿಯ ದರೋಡೆ, ಯಾವುದೋ ಒಂದು ಕೆಮಿಕಲ್‌ನ್ನು ಉಪಯೋಗಿಸಿ ಪ್ರಯಾಣಿಕರಿಗೆ ನಿದ್ದೆ ಬರುವಂತೆ ಮಾಡಿ ದರೋಡೆ ಮಾಡಿದ್ದಾರೆಂದು ಕೇಳಿದ್ದೇವೆ. ಇವತ್ತು ಮನೆಗಳಲ್ಲಿ ನಾವೆಂತೂ ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಬಸ್‌ಗಳಲ್ಲಾಗಲಿ, ರೈಲ್‌ನಲ್ಲಿ ಆಗಲಿ ಪ್ರಯಾಣ ಮಾಡುವುದಕ್ಕೂ ಹೆದರಿಕೆಯಾಗುತ್ತಿದೆ. ಈ ರೈಲು ದರೋಡೆ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ ? ಯಾರನ್ನಾದರೂ ಪತ್ತೆ ಹಚ್ಚಿದ್ದೀರಾ ?

ಶ್ರೀ ಬಿ. ರಾಚಯ್ಯ.— ಯಾರನ್ನೂ ಇನ್ನೂ ಪತ್ತೆ ಹಚ್ಚಿಲ್ಲ ನವುಗೆ ಸಿಕ್ಕಿರತಕ್ಕ ಲಿಮಿಟ್ ಬಹಳ ಕಡಿಮೆ ಇದೆ. ಆಂಧ್ರ, ಮಹಾರಾಷ್ಟ್ರ ಮತ್ತು ನಮ್ಮ ರಾಜ್ಯ ಈ ೩ ರಾಜ್ಯಗಳ ಪೋಲೀಸರನ್ನೂ ಸೇರಿಸಿ ಈ ಪ್ರಕರಣವನ್ನು ತನಿಖೆ ಮಾಡುವುದಕ್ಕೆ ಕಳುಹಿಸಿಕೊಟ್ಟಿದ್ದೇವೆ. ನಮ್ಮ ಡಿ. ಐ. ಜಿ. ಯವರು ವಾಡಿಯಂಲ್ಲೇ ಟಿಕಾಣಿ ಮಾಡಿದ್ದಾರೆ. ಪ್ರಯಾಣಿಕರ ಮೂಗಿಗೆ ಈ ರೀತಿ ಏನೋ ಒಂದು ಬಗೆಯ ಕೆಮಿಕಲ್‌ನ್ನು ಉಪಯೋಗಿಸಿದ್ದಾರೆ. ಎಂಬ ಹೊಸ ವಿಚಾರವನ್ನು ನಾವು ಕೇಳಿದ್ದೇವೆ. ಅದು ಯಾವ ಕೆಮಿಕಲ್ ಎಂಬುದನ್ನು ಪತ್ತೆ ಮಾಡಲು ತಜ್ಞರಿಂದ ಪರೀಕ್ಷೆ ಮಾಡಿಸಲು ತಿಳಿಸಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.— ತಾವು ತಮ್ಮ ಹೇಳಿಕೆಯಲ್ಲಿ ೧. ಮಹಿಳೆಯರ ಕೋಣೆಗೆ ಬೇರೆ ಬಾಗಿಲು ಇರಲಿಲ್ಲ. ಆ ಬೋಗಿಯ ವೆಸ್ಟಿಬುಲ್ ಕ್ಯಾನಾವಾಸ್‌ನ ಬಟ್ಟೆಯು ಹರಿದಿದ್ದು, ದುಷ್ಕರ್ಮಿಗಳು ಆದನ್ನು ಬೋಗಿಯ ಒಳಕ್ಕೆ ಹೋಗುವುದಕ್ಕೆ ಮತ್ತು ಹೊರಗಡೆ ಬರುವುದಕ್ಕೆ ಉಪಯೋಗಿಸಿಕೊಂಡಿರಬಹುದೆಂದು ಹೇಳಿದ್ದೀರಿ. ನಮ್ಮ ರಾಜ್ಯದಲ್ಲಿ ಓಡಾಡತಕ್ಕ ರೈಲುಗಳಲ್ಲಿ ಇದು ಮೊದಲನೇ ಬಾರಿಗೆ ನಡೆದಿರತಕ್ಕ ದರೋಡೆ, ಹೊಸ ರೀತಿಯಲ್ಲಿ ನಡೆದಿರತಕ್ಕ ದರೋಡೆ ಆದ್ದರಿಂದ ಇದನ್ನು ಇನ್ನೂ ಪತ್ತೆ ಹಚ್ಚುವುದಕ್ಕೆ ಆಗಿಲ್ಲವೆಂದು ಹೇಳಿದ್ದೀರಿ. ನೀವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ದರೋಡೆಯ ಬಗ್ಗೆ ಪತ್ತೆ ಹಚ್ಚಿರುವುದಕ್ಕೆ ನಿಮ್ಮನ್ನು ನಾವು ಶ್ಲಾಘಿಸುತ್ತೇವೆ. ಆದರೆ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲೂ ಈ ರೀತಿ ದರೋಡೆಗಳು ಹೆಚ್ಚುತ್ತಾ ಹೋದರೆ ಸಾರ್ವಜನಿಕರು ಯಾವ ರೀತಿ ಪ್ರಯಾಣ ಮಾಡಬೇಕು ? ನಾನು ತಮಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಬೋಗಿಯ ವೆಸ್ಟಿಬುಲ್ ಕ್ಯಾನ್‌ವಾಸ್ ಬಟ್ಟೆಯಾಂ ಮೊದಲೇ ಹರಿದಿತ್ತೇ, ಅಥವಾ ಈ ದರೋಡೆಕೋರರು ಹರಿದು ಹಾಕಿದ್ದಾರೆಯೇ ಎಂಬುದನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳುವಂತೆ ತಾವು ಕೇಂದ್ರದ ರೈಲ್ವೆ ಮಂತ್ರಿಗಳನ್ನೂ ಮತ್ತು ರೈಲ್ವೆ ಅಧಿಕಾರಿಗಳನ್ನೂ ಕೇಳಬೇಕು. ಈಗ ರೈಲಿನಲ್ಲಿ ಪ್ರಯಾಣಿಕರ ಹಿತದೃಷ್ಟಿಯಿಂದ ರೈಲುಗಳಲ್ಲಿ ಸಶಸ್ತ್ರ ಪೋಲೀಸ್ ಬಂದೋಬಸ್ತ್‌ನ್ನು ಮಾಡುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದಾರೆಯೆ ? ಈ ವ್ಯವಸ್ಥೆಯನ್ನು ಎಲ್ಲ ರಾಜ್ಯಗಳಲ್ಲೂ ಓಡಾಡತಕ್ಕ ರೈಲುಗಳಲ್ಲಿ ಮಾಡುತ್ತಾರೆಯೇ ?

ಎರಡನೆಯದಾಗಿ, ನಿದ್ದೆ ಬರುವಂತೆ ಮಾಡಲು ಉಪಯೋಗಿಸಿರತಕ್ಕ ಕೆಮಿಕಲ್ ಯಾವುದು ಆದನ್ನು ಟೆಸ್ಟ್‌ಗೆ ಕಳುಹಿಸಿಕೊಟ್ಟಿದ್ದೀರಾ ? ನಿಮಗೆ ವಿವರಗಳೇನಾದರೂ ಸಿಕ್ಕಿವೆಯೆ ?

ಮೂರನೆಯದಾಗಿ ಈ ಪ್ರಕರಣದಲ್ಲಿ ಒಟ್ಟು ೨೭,೨೦೦ ರೂ.ಗಳನ್ನು ಕಳೆದುಕೊಂಡಿರತಕ್ಕ ಈ ಜನರಿಗೆ ಪರಿಹಾರವನ್ನು ರಾಜ್ಯ ಸರ್ಕಾರದವರು ಕೊಡುತ್ತಾರೆಯೇ ? ಅಥವಾ ಕೇಂದ್ರಸರ್ಕಾರದವರು ಕೊಡುತ್ತಾರೆಯೆ ? ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ರಾಚಯ್ಯ.— ಈ ರೈಲು ಒಂದು ಗಂಟೆಗೆ ಸುಮಾರು ೧೦೦ ಕಿಲೋಮೀಟರ್ ವೇಗದಲ್ಲಿ ಹೋಗುವಂಥಾದ್ದು. ವಾಡಿ ಸ್ಟೇಷನ್ ಇರುವುದು ನಮ್ಮ ಕರ್ನಾಟಕ ರಾಜ್ಯದ ಕೊನೆಯಲ್ಲಿ. ಈ ಪ್ರಕರಣವನ್ನು ನೋಡಿದರೆ ನಮ್ಮ ಲಿಮಿಟ್‌ಗೆ ಬರತಕ್ಕದ್ದು ಬಹಳ ಕಡಿಮೆ. ಈ ರೈಲು ನಮ್ಮ ಕರ್ನಾಟಕ ರಾಜ್ಯಕ್ಕೆ ಬರುವುದಕ್ಕೆ (ಪ್ರವೇಶಿಸುವುದಕ್ಕೆ) ಮಂಂಚೆ ಈ ಕಳ್ಳತನ ಆಗಿರಬಹುದು.

ಇನ್ನೊಂದು ಏನೆಂದರೆ, ಟಾಪ್‌ಮೇಲೆ ಮೊದಲೇ ಕುಳಿತಿದ್ದು ಅನಂತರ ಅವರು ಕೆಳಗೆ ಇಳಿದಿರುವ ವಿಚಾರವನ್ನು ಪೋಲೀಸರು ಒಪ್ಪಿಲ್ಲ. ಅವರು ನೇರವಾಗಿ ಸ್ಟೇಷನ್‌ನಲ್ಲಿಯೇ ಹತ್ತಿರಬಹುದೆಂದು ನಿರೀಕ್ಷೆ ಇದೆ. ಡಕಾಯಿತಿನ ಹೆಚ್ಚಾಗಿದೆ ಎನ್ನುವ ವಿಚಾರದಲ್ಲಿ ನಾನು ಈಗಾಗಲೇ ಹೇಳಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಪ್ರಕರಣದಲ್ಲಿ ನಾವು ಡಕಾಯಿತರನ್ನು ಹಿಡಿದಿದ್ದೇವೆ. ಗದಗ್, ರಾಯಚೂರು, ಚಿತ್ರದುರ್ಗ ಭಾಗಗಳಲ್ಲಿ ದರೋಡೆ ಮಾಡುತ್ತಿದ್ದ ೭ ಜನರನ್ನು ನಾವು ಬಂಧಿಸಿದ್ದೇವೆ. ಇನ್ನು ಬೆಂಗಳೂರಿನಲ್ಲಿ ನಡೆದಿರತಕ್ಕ ದರೋಡೆಗೆ ಸಂಬಂಧಪಟ್ಟವರನ್ನು ಹಿಡಿಯಬೇಕಾಗಿದೆ. ಆದರೆ ಕಳೆದ ೩ ತಿಂಗಳಿಂದ ಇಂಥ ಪ್ರಕರಣಗಳಲ್ಲಿ ಸ್ವಲ್ಪಮಟ್ಟಿಗೆ ಕಡಿಮೆಯಾಗಿವೆ. ಆದರೆ ಈಗ ನಡೆದಿರುವುದು ಅತ್ಯಂತ ಅಮಾನುಷವಾದದ್ದು. ಈ ಪ್ರಕರಣದ ತನಿಖೆಗಾಗಿ ೩ ರಾಜ್ಯಗಳ ಪೋಲೀಸರನ್ನು ಅಲ್ಲಿ ಹಾಕಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.— ವೆಸ್ಟಿಬುಲ್ ಕ್ಯಾನ್‌ವಾಸ್ ಮೊದಲೇ ಹರಿದಿತ್ತೆ ? ಅಥವಾ ದರೋಡೆಕೋರರು ಹರಿದಿದ್ದಾರೆಯೆ ? ಎಂಬುದನ್ನು ಪತ್ತೆ ಹಚ್ಚಿಸುತ್ತೀರಾ ?

ಶ್ರೀ ಬಿ. ರಾಚಯ್ಯ.— ಇದನ್ನು ಪತ್ತೆ ಹಚ್ಚಿಸುವುದಕ್ಕಾಗಿಯೇ ನಮ್ಮ ಡಿ. ಐ. ಜಿ. ಯವರನ್ನು ಅಲ್ಲಿ ಇಟ್ಟಿದ್ದೇವೆ. ಅದಕ್ಕಾಗಿ ಇಲ್ಲಿಯ ರೈಲ್ವೆ ಅಧಿಕಾರಿಗಳ ಜೊತೆಯಲ್ಲಿಯೂ ಚರ್ಚೆ ಮಾಡಿರುತ್ತೇವೆ, ಮತ್ತು ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿಗಳ ಜೊತೆಯಲ್ಲೂ ಸಹ ಪದೇ ಪದೇ ಹೋಗಿ ಒತ್ತಾಯ ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಓಡಾಡತಕ್ಕಂಥ ರೈಲ್ವೆಗಳಿಗೆ ಶಸ್ತ್ರಸಜ್ಜಿತ ಪೋಲೀಸ್ ಅಧಿಕಾರಿಗಳನ್ನೊಳ್ಳಗೊಂಡಂತೆ, ರೈಲುಗಳು ಓಡಾಡುವಂತೆ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡಿರುತ್ತೇನೆ.

ಶ್ರೀ ಆರ್. ರಾವಂಯ್ಯ.— ರೈಲ್ವೆಯಲ್ಲಿ ಆಗತಕ್ಕಂಥ ದರೋಡೆ ಯಾವ ರೀತಿಯಾಗಿ ನಡೆಯುತ್ತಿದೆ ಎಂದರೆ ಕಳ್ಳರು ದರೋಡೆ ಮಾಡಿಕೊಂಡು ಹೋದ ಮೇಲೆ ಕೆಳವು ಸಂಗತಿಯನ್ನು ತಿಳಿಸಿದರೆ ತಕ್ಷಣ ಬಂದು ಕ್ರಮ ತೆಗೆದುಕೊಳ್ಳುವುದಿಲ್ಲ. ಎ.ಎಸ್.ಐ. ಗೆ ತಿಳಿಸಿದರೆ ಇದನ್ನು ಸರ್ಕಲ್ ಇನ್‌ಸ್ಪೆಕ್ಟರ್‌ರವರಿಗೆ ತಿಳಿಸಬೇಕೆಂದು ಹೇಳುತ್ತಾರೆ. ಅಲ್ಲಿಯವರೆಗೆ ಏನು ಕ್ರಮ ತೆಗೆದುಕೊಳ್ಳುವಂತೆ ಇಲ್ಲ. ಆದ್ದರಿಂದ ಇದರ ಬಗ್ಗೆ ಸೂಕ್ತ ತಿಳುವಳಿಕೆಯನ್ನು ಕೊಡಬೇಕು. ಮತ್ತು ಬೆಂಗಳೂರಿನಲ್ಲಿ ಪುನಃ ದರೋಡೆಗಳು ನಡೆಯುತ್ತಿರುತ್ತವೆ. ಒಬ್ಬ ಪರ್ಚೆಂಟ್‌ನ್ನು ಲೂಟಿಮಾಡಿ ಸುಮಾರು ೧೨,೦೦೦ ರೂಪಾಯಿಗಳನ್ನು ದೋಚಿಕೊಂಡು ಹೋಗಿರುತ್ತಾರೆ. ಇದರ ಬಗ್ಗೆ ತುರ್ತು ಗಮನಕೊಟ್ಟು ಪೋಲೀಸ್‌ನವರಿಂದ ಆಗುತ್ತಿರುವ ನಿರ್ಲಕ್ಷ್ಯತನವನ್ನು ತಪ್ಪಿಸಬೇಕು.

ಶ್ರೀ ಬಿ. ರಾಚಯ್ಯ.— ಪೋಲೀಸರಿಂದ ನಿರ್ಲಕ್ಷ್ಯತನವಾಗುತ್ತಿಲ್ಲ ರೈಲ್ವೆ ದರೋಡೆ ನಮ್ಮ ಬಾರ್ಡರ್‌ನಲ್ಲಿ ಆಗಿರುವುದರಿಂದ ಅದು ನಮ್ಮ ರಾಜ್ಯಕ್ಕೆ ಬರುವುದಕ್ಕೆ ಮೊದಲೇ ನಡೆದಿರತಕ್ಕಂಥದ್ದೋ, ಅಥವಾ ಬಂದಮೇಲೆ ನಡೆದಿರತಕ್ಕಂಥದ್ದೋ ಎನ್ನುವ ಬಗ್ಗೆ ಬಹುಶ: ಮೂರು ರಾಜ್ಯಗಳ ಪೋಲೀಸ್ ಅಧಿಕಾರಿಗಳು ಸಮಾಲೋಚನೆ ಮಾಡಬೇಕಾಗಿರುತ್ತದೆ. ಬೆಂಗಳೂರಿನಲ್ಲಿ ಈಗ ದಿನನಿತ್ಯ ಆಗುತ್ತಿದ್ದ ಕಳ್ಳತನ ಇದರ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳುತ್ತೇನೆ. ಜನಸಂಖ್ಯೆ ವಿಪರೀತವಾಗಿರುವಾಗ ಸಂಪೂರ್ಣವಾಗಿ ಇದು ಇಲ್ಲ ದಹಾಗೆ ಮಾಡುತ್ತೇನೆ ಎಂದು ಹೇಳತಕ್ಕಂಥ ಪರಿಸ್ಥಿತಿಯಲ್ಲಿ ನಾನು ಇಲ್ಲ.

BREACH OF PRIVILEOE NOTICE.

Reg. Statement by the Home Minister involvoing the leader of the opposition n at Criminal nspiracy.—

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರು ಪ್ರಿವಿಲೇಜ್ ಮೋಷನ್ ಬಗ್ಗೆ ಮಾತನಾಡಬಹುದು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ಯಮಾವಳಿ ೧೯೦ರ ಪ್ರಕಾರ ಒಂದು ಹಕ್ಕುಬಾದ್ಯತಾ ನಿರ್ಣಯವನ್ನು ಮಾನ್ಯ ಗೃಹಸಚಿವರಾದ ಶ್ರೀ ರಾಚಯ್ಯನವರ ವಿರುದ್ಧ ಕಳುಹಿಸಿ ಕೊಟ್ಟಿದ್ದೇನೆ. ಇದರ ಬಗ್ಗೆ ನಾನು ನಮ್ಮ ಪಕ್ಷದ ಬಹುಪಾಲು ಸದಸ್ಯರು ಎಲ್ಲರೂ ಕೂಡ ಈ ವಿಷಯ ಇರತಕ್ಕಂಥದ್ದು

> "Sri B. Rachaiah Minister for Home while replying to the discussion on the demands of Home Department has committed breach of privilege of this House by producing doubtful, irrelevant, illegal, improper and false document intending to involve the names of the Leader of the Opposition in the Legislative Assembly in a criminal conspiracy knowingly fully well that it was not admissible either on the floor of the House or in the court and thereby misleading the House for creating a false impression against the Leader of the Opposition in the Legislative Assembly."